# ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ

**6ನೇ ಮತ್ತು 7ನೇ ಮಹಡಿ, ಕಂದಾಯ ಭವನ, ಕೆಂಪೇಗೌಡ ರಸ್ತೆ,**

**ಬೆಂಗಳೂರು – 560 009.**

## ಅಧಿಸೂಚನೆ

**ಸಂಖ್ಯೆ:ಕೆಎಟಿ/ಸಿಬ್ಬಂದಿ(1)/ಮಾಹಅ–ಮಾಹಿತಿ/34/2014, ದಿನಾಂಕ: 17.04.2018**

ಮಾಹಿತಿ ಹಕ್ಕು ಅಧಿನಿಯಮ 2005 ಕಲಂ 4(1)(ಎ) ಯಲ್ಲಿ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಗೆ ಸಂಬಂಧಪಟ್ಟ ಈ ಕೆಳಕಂಡ ಮಾಹಿತಿಗಳನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಆಡಳಿತ ನ್ಯಾಯಮಂಡಳಿಯ ಅಧಿಕೃತ **ವೆಬ್‌ಸೈಟ್ ksat.kar.nic.in** ರಲ್ಲಿ ಪ್ರಕಟಿಸಲಾಗಿದೆ/ ಪ್ರಕಟಿಸಲಾಗುತ್ತಿದೆ.

1) ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಗೆ ಸಂಬಂಧಿಸಿದ ಕಾಯ್ದೆ, ನಿಯಮ ಮತ್ತು ನಿಯಂತ್ರಣಗಳು.
2) ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯಲ್ಲಿ ಬಳಸಲಾಗುವ ಎಲ್ಲಾ ರೀತಿಯ ನಮೂನೆಗಳು.
3) ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯಲ್ಲಿ **ನವೆಂಬರ್–2006ರ** ನಂತರ ತೀರ್ಮಾನವಾಗಿರುವ ಆಯ್ದ ಪ್ರಕರಣಗಳ ಅಂತಿಮ ಆದೇಶದ ಪ್ರತಿಗಳು.
4) ಎಲ್ಲಾ ನ್ಯಾಯಾಂಗಣಗಳ ದಿನಂಪ್ರತಿ ಮೊಕದ್ದಮೆಗಳ ಪಟ್ಟಿ.
5) ಕಾಲಕಾಲಕ್ಕೆ ಪ್ರಕಟಗೊಳ್ಳುವ ಅಧಿಸೂಚನೆಗಳು ಮತ್ತು ಪ್ರಕರಣಗಳ/ಅರ್ಜಿಗಳ ಬಾಕಿ ಮತ್ತು ವಿಲೇವಾರಿಗೆ ಸಂಬಂಧಿಸಿದ ಅಂಕಿ–ಅಂಶಗಳು.

ಮುಂದುವರೆದು, ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯನ್ನು ಸಂಪೂರ್ಣ ಗಣಕೀಕೃತಗೊಳಿಸುವ ಕಾರ್ಯ ತ್ವರಿತಗತಿಯಲ್ಲಿ ಸಾಗುತ್ತಿದ್ದು, ಸದರಿ ಕಾರ್ಯ ಪೂರ್ಣಗೊಂಡ ನಂತರ, ನ್ಯಾಯಮಂಡಳಿಯಲ್ಲಿ ದಾಖಲಾಗುವ ಎಲ್ಲಾ ರೀತಿಯ ಅರ್ಜಿಗಳ/ಪ್ರಕರಣಗಳ ದಾಖಲಾತಿ, ಅರ್ಜಿ ಸಂಖ್ಯೆ, ಅರ್ಜಿಯ ಹಂತ, ಅರ್ಜಿಯ ಚಲನ–ವಲನ, ಮಧ್ಯಂತರ ಆದೇಶ, ಮುಂತಾದ ಎಲ್ಲಾ ವಿವರಗಳನ್ನು ವೆಬ್‌ಸೈಟ್‌ನಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗುತ್ತದೆ.

**'ಸನ್ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ'**

**ವಿಲೇಖನಾಧಿಕಾರಿಗಳು**
**ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ,**
**ಬೆಂಗಳೂರು – 09.**

17/4

*ಎಂಆರ್